**Code No. 16 X**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರವೀಣ ದರ್ಜೆ – ಪ್ರಥಮ ಪತ್ರಿಕೆ

# (ವೇಗ ಮತ್ತು ಉಕ್ತಲೇಖನ)

ಜನವರಿ / ಫೆಬ್ರವರಿ, 2020

ವೇಳೆ { ಉಕ್ತಲೇಖನ : 7 ನಿಮಿಷಗಳು
ಲಿಪಿ ಬರಹ : 1 ಗಂಟೆ 45 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಾನ್ಯರೇ,

ಶಾಲಾ ಶಿಕ್ಷಣ ವ್ಯವಸ್ಥೆಯ ಸ್ಥಾನದಲ್ಲಿ
ಕರ್ನಾಟಕ ರಾಜ್ಯವು ದೇಶದಲ್ಲೇ ಮೂರನೇ
ಸ್ಥಾನ ಪಡೆಯುವ ಮೂಲಕ ದೇಶದ
ಶೈಕ್ಷಣಿಕ ಕ್ಷೇತ್ರದಲ್ಲಿ ಆಶಾದಾಯಕ ಸ್ಥಾನವನ್ನು
ತನ್ನದಾಗಿಸಿಕೊಂಡಿದೆ. ನೀತಿ ಆಯೋಗ
$\frac{1}{4}$ ನಡೆಸಿ/ದ ಈ ಮಾದರಿಯ ಮೊಟ್ಟಮೊದಲ
ಸಮೀಕ್ಷೆಯಿದು. ಈಗಾಗಲೇ ಆರೋಗ್ಯ,
ನೈರ್ಮಲ್ಯ ಮುಂತಾದ ಕ್ಷೇತ್ರದಲ್ಲಿ ರಾಜ್ಯಗಳಿಗೆ
ರ್‍ಯಾಂಕಿಂಗ್ ನೀಡುವ ವ್ಯವಸ್ಥೆ ಆರಂಭಿಸುವ
ಮೂಲಕ ಗುಣಮಟ್ಟ ಹೆಚ್ಚಿಸಿಕೊಳ್ಳುವಂತೆ
$\frac{1}{2}$ ಪ್ರೋತ್ಸಾಹ ನೀಡುತ್ತಿರುವ ನೀ/ತಿ ಆಯೋಗ
ಈ ವರ್ಷದಿಂದ ಶಾಲಾ ಶಿಕ್ಷಣ ವ್ಯವಸ್ಥೆಯ
ಗುಣಮಟ್ಟದಲ್ಲಿ ರಾಜ್ಯಗಳಿಗೆ ರ್‍ಯಾಂಕಿಂಗ್
ನೀಡುವ ವ್ಯವಸ್ಥೆ ಆರಂಭಿಸಿದೆ. ಅದರಲ್ಲಿ ಕೇರಳ
ಮೊದಲ ಸ್ಥಾನ, ರಾಜಸ್ಥಾನ ಎರಡನೇ ಸ್ಥಾನ
ಹಾಗೂ ಕರ್ನಾಟಕ ಮೂರನೇ ಸ್ಥಾ/ನ $\frac{3}{4}$
ಪಡೆದಿವೆ. ಮೊದಲಿನಿಂದಲೂ ಸಾಕ್ಷರತೆಯಲ್ಲಿ
ಒಂದನೇ ಸ್ಥಾನ ಕಾಯ್ದುಕೊಂಡು ಬಂದಿರುವ
ಕೇರಳದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ
ಶಿಕ್ಷಣ ವ್ಯವಸ್ಥೆ ಚೆನ್ನಾಗಿದೆ ಎಂಬುದು
ನಿರೀಕ್ಷಿತವೇ ಆಗಿತ್ತು. ಆದರೆ, ಅನಕ್ಷರತೆಯX 1
ಪ್ರಮಾಣ ಹೆಚ್ಚಿರುವ ಹಾಗೂ ಹಿಂದುಳಿದ
ರಾಜ್ಯವಾಗಿರುವ ರಾಜಸ್ಥಾನ ಎರಡನೇ ಸ್ಥಾನ

ಗಳಿಸಿರುವುದು ಮತ್ತು ಕರ್ನಾಟಕಕ್ಕಿಂತ
ಮುಂದಿದೆ ಎಂಬುದು ಕುತೂಹಲಕರ ವಿಷಯ.
ಇನ್ನು ಶಾಲಾ ಶಿಕ್ಷಣದಲ್ಲಿ ತೀರ ಅದ್ಭುತ
1/4 ಪ್ರಗತಿ/ಯನ್ನೂ ಸಾಧಿಸದೆ, ತೀರಾ ಹಿಂದೆಯೂ
ಬೀಳದೆ ಸಾಗಿದ್ದ ಕರ್ನಾಟಕಕ್ಕೆ ದೇಶದ ಮೊದಲ
ಅಧಿಕೃತ ಶೈಕ್ಷಣಿಕ ಸಮೀಕ್ಷೆಯಲ್ಲಿ ಮೂರನೆಯ
ಸ್ಥಾನ ಲಭಿಸಿರುವುದು ಶೈಕ್ಷಣಿಕ ಕ್ಷೇತ್ರದಲ್ಲಿ
1/2 ನಮ್ಮ ರಾಜ್ಯದ ಸ್ಥಿತಿಗತಿಯೇನು ಮತ್ತು ಅ/ದನ್ನು
ಇನ್ನಷ್ಟು ಸುಧಾರಣೆ ಮಾಡಿಕೊಳ್ಳುವುದು ಹೇಗೆ
ಎಂಬ ಬಗ್ಗೆ ಗಮನಹರಿಸಲು ನೆರವಾಗಲಿದೆ.
ಮಕ್ಕಳ ಕಲಿಕೆಯ ಗುಣಮಟ್ಟ, ವಿದ್ಯಾರ್ಥಿಗಳ
ಹಾಜರಾತಿ, ಶಿಕ್ಷಕರ ನೇಮಕಾತಿ
3/4 ಪ್ರಕ್ರಿಯೆಯಲ್ಲಿನ ಪಾರದರ್ಶಕತೆ, ಶೈ/ಕ್ಷಣಿಕ
ಆಡಳಿತ ಮುಂತಾದ ಸಂಗತಿಗಳನ್ನು ಆಧರಿಸಿ
ನೀತಿ ಆಯೋಗ ಈ ರ್‍ಯಾಂಕಿಂಗ್ ನೀಡಿದೆ.

ನಮ್ಮ ದೇಶದಲ್ಲಿ ಶೈಕ್ಷಣಿಕ ವ್ಯವಸ್ಥೆಯ
ಗುಣಮಟ್ಟವನ್ನು ನಿಷ್ಕರ್ಷಿಸುವ ಯಾವುದೇ
2 ಅಧಿಕೃತ ಅಧ್ಯಯನ ವ್ಯವಸ್ಥೆ ಇಷ್ಟು ವರ್ಷX
ಇರಲಿಲ್ಲ. ಪಂಚವಾರ್ಷಿಕ ಯೋಜನೆಗಳಲ್ಲಿ
ಹಾಗೂ ಪ್ರತಿ ವರ್ಷದ ಬಜೆಟ್‌ನಲ್ಲಿ ಶಿಕ್ಷಣ
ಕ್ಷೇತ್ರಕ್ಕೆ ಇಂತಿಷ್ಟು ಹಣ ಖರ್ಚು ಮಾಡಬೇಕು
ಎಂಬ ಸಂಕಲ್ಪ ಮಾಡಲಾಗುತ್ತಿತ್ತಾದರೂ
ಯಾವ ರಾಜ್ಯಗಳು ಶೈಕ್ಷಣಿಕ ಪ್ರಗತಿಯಲ್ಲಿ
ಹಿಂದುಳಿ/ದಿವೆ ಮತ್ತು ಯಾವ ರಾಜ್ಯಗಳು 1/4
ಮುಂದಿವೆ ಎಂಬುದನ್ನು ಪರಿಗಣಿಸಿ
ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಿರಲಿಲ್ಲ.
ಹಲವು ವರ್ಷಗಳಿಂದ ಖಾಸಗಿ ಸಂಸ್ಥೆಯೊಂದು
ಅಸರ್ ಎಂಬ ಶೈಕ್ಷಣಿಕ ಸಮೀಕ್ಷೆ ನಡೆಸಿ
ರಾಜ್ಯಗಳಿಗೆ ನೀಡು/ತ್ತಾ ಬಂದಿರುವ 1/2
ರ್‍ಯಾಂಕಿಂಗ್‌ಗೆ ಈ ವಿಷಯದಲ್ಲಿ ಲಭ್ಯವಿರುವ
ಏಕೈಕ ಅಂಕಿ–ಅಂಶವಾಗಿತ್ತು. ಅದನ್ನು
ಬಿಟ್ಟರೆ ಯಾವ ರಾಜ್ಯದಲ್ಲಿ ಸಾಕ್ಷರತೆ
ಎಷ್ಟಿದೆ ಎಂಬ ಹತ್ತು ವರ್ಷಕ್ಕೊಮ್ಮೆ
ನಡೆಯುವ ಜನಗಣತಿಯ ಅಂಕಿ–ಅಂಶವನ್ನು
ಆಧರಿ/ಸಿಯೇ ಶೈಕ್ಷಣಿಕ ಪ್ರಗತಿಯನ್ನು 3/4
ಅಂದಾಜಿಸಬೇಕಿತ್ತು. ಈಗ ನೀತಿ
ಆಯೋಗದಿಂದ ಅಧಿಕೃತ ರ್‍ಯಾಂಕಿಂಗ್
ನೀಡುವ ವ್ಯವಸ್ಥೆ ಬಂದಿರುವುದರಿಂದ ಇನ್ನು
ಮುಂದೆ ರಾಜ್ಯಗಳ ಶೈಕ್ಷಣಿಕ ಪ್ರಗತಿಯ
ದಾಖಲೀಕರಣ ವ್ಯವಸ್ಥಿತವಾಗಿX ನಡೆಯಲಿದೆ. 3
ಆದ್ದರಿಂದ ಮಾನವ ಸಂಪನ್ಮೂಲ
ಸಚಿವಾಲಯಕ್ಕೆ ಹಾಗೂ ರಾಜ್ಯ ಸರ್ಕಾರಗಳಿಗೆ
ಶೈಕ್ಷಣಿಕ ನೀತಿಗಳನ್ನೂ, ಅಗತ್ಯ
ಯೋಜನೆಗಳನ್ನೂ ರೂಪಿಸುವುದಕ್ಕೆ
ಅನುಕೂಲವಾಗಲಿದೆ.

$\frac{1}{4}$ ಈಗಿನ ಸಮೀಕ್ಷೆಯಲ್ಲಿ ಕರ್ನಾಟ/ಕಕ್ಕೆ
ಮೂರನೇ ಸ್ಥಾನ ಲಭಿಸಿರುವುದು ದೊಡ್ಡ
ರಾಜ್ಯಗಳ ವಿಭಾಗದಲ್ಲಿ. ಸಣ್ಣ ರಾಜ್ಯಗಳು ಹಾಗೂ
ಕೇಂದ್ರಾಡಳಿತ ಪ್ರದೇಶಗಳ ಇನ್ನೆರಡು ಪ್ರತ್ಯೇಕ
ವಿಭಾಗಗಳನ್ನೂ ಒಟ್ಟಾರೆಯಾಗಿ ಪರಿಗಣಿಸಿದರೆ
$\frac{1}{2}$ ರಾಜ್ಯಕ್ಕೆ ಮೂರನೇ ಸ್ಥಾನ/ಲಭ್ಯವಾಗದೆ
ಹೋಗಬಹುದು. ರಾಜ್ಯ ಸರ್ಕಾರವು ಈ
ಸ್ಥಾನಮಾನವನ್ನು ರಾಜ್ಯದ ಶೈಕ್ಷಣಿಕ ಪ್ರಗತಿಗೆ
ಕೈಗೊಳ್ಳಬೇಕಾದ ಸುಧಾರಣಾ ಕ್ರಮುಗಳಿಗೆ
ಮಾನದಂಡವಾಗಿ ಪರಿಗಣಿಸಿ ಭವಿಷ್ಯದ
$\frac{3}{4}$ ಯೋಜನೆಗಳನ್ನು ಕೈಗೊಳ್ಳಬೇಕಿ/ದೆ. ಈ
ಸಮೀಕ್ಷೆಗೆ ಅನುಸರಿಸಿದ ವಿಸ್ತೃತ
ಮಾನದಂಡಗಳು ಹಾಗೂ ಫಲಿತಾಂಶಗಳ ಬಗ್ಗೆ
ನೀತಿ ಆಯೋಗವು ನೂರಾ ಐವತ್ತು
ಪುಟಗಳ ದೊಡ್ಡ ವರದಿ ಬಿಡುಗಡೆ ಮಾಡಿದೆ.
ಅದರಲ್ಲಿ ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯ
4 ಬXಗ್ಗೆ ಸಾಕಷ್ಟು ಒಳನೋಟಗಳಿವೆ. ಉತ್ತಮ
ರ್‍ಯಾಂಕಿಂಗ್ ಭವಿಷ್ಯದ ಪ್ರಯತ್ನಗಳಿಗೆ
ಸ್ಫೂರ್ತಿಯಾಗಿ, ವರದಿಯ ಇನ್ನಿತರ ಅಂಶಗಳು
ಭವಿಷ್ಯದ ಸುಧಾರಣೆಗೆ ಮೆಟ್ಟಿಲಾಗಬೇಕಿದೆ.

ಇನ್ನು ಕಳೆದ ಎರಡು ದಶಕಗಳಿಂದ
$\frac{1}{4}$ ರಾಷ್ಟ್ರ/ದ ರಾಜಧಾನಿ ದೆಹಲಿ ಮಹಾನಗರದಲ್ಲಿ
ಪರಿಸರ ಮಾಲಿನ್ಯ ಮಿತಿ ಮೀರುತ್ತ
ಸಾಗಿದ್ದು, ಅಲ್ಲಿನ ನಾಗರೀಕರು
ಉಸಿರಾಡಲೂ ಪರದಾಡುವಂತಾಗಿದೆ.
ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಅಲ್ಲಿನ
ಜನತೆ ಪರ್ವತಾರೋಹಿ/ಗಳಂತೆ ಬೆನ್ನಿನ $\frac{1}{2}$
ಮೇಲೆ ಆಕ್ಸಿಜನ್ ಸಿಲಿಂಡರ್
ಹೊತ್ತುಕೊಂಡು ತಿರುಗುವ ಪ್ರಮೇಯ
ಎದುರಾಗಬಹುದೇನೋ ? ಸದ್ಯ ದೆಹಲಿಯ
ಪರಿಸ್ಥಿತಿ ಅಷ್ಟು ಹದಗೆಟ್ಟಿದೆ.

ಬೇಸಿಗೆಯಲ್ಲಿ ನಲವತ್ತೈದು ಸೆಲ್ಸಿಯಸ್‌ಗೂ
ಹೆಚ್ಚು ತಾಪಮಾನ, ಮಳೆ/ಗಾಲದಲ್ಲಿ $\frac{3}{4}$
ತಗ್ಗು ಪ್ರದೇಶವೆಲ್ಲಾ ಜಲಾವೃತವಾಗುವಂತೆ
ಕುಂಭದ್ರೋಣ ಮಳೆ, ಚಳಿಗಾಲದಲ್ಲಿ
ಒಂದರ್ಥದ ವಿಷಮಶೀತದ ಗಾಳಿ, ಒಮ್ಮೊಮ್ಮೆ
ಧೂಳಿನ ಸುನಾಮಿ. ಎದುರಿನ ಕಟ್ಟಡ, ಮರಗಳು
ಕಾಣದಷ್ಟು ಮಂಜು. ಎಲ್ಲವೂ ಅತೀ
ಎXನ್ನುವಂತೆ ರಾಜಧಾನಿಯನ್ನು ಕಾಡುತ್ತಿವೆ. 5
ಯಾವ ಹಂಗಾಮೂ ನಿರಾಳ ಎನ್ನುವಂತಿಲ್ಲ.
ಸದಾ ಆರೋಗ್ಯ ಕವಚ ತೊಟ್ಟುಕೊಂಡೇ
ಬದುಕಬೇಕು. ಒಳ್ಳೆಯ ನೀರು, ಊಟ, ವಸತಿ
ಸಿಕ್ಕಿತು. ಶುದ್ಧ ಗಾಳಿ ಮಾತ್ರ ಅಸಾಧ್ಯ ಎನ್ನುವ
ಮಾತು ಅಲ್ಲಿ ಪ್ರಚಲಿ/ತಕ್ಕೆ ಬಂದಿದ್ದು, ಶ್ವಾಸ $\frac{1}{4}$

ಸಂಬಂಧಿ ರೋಗಗಳು ಮಕ್ಕಳು ಮತ್ತು ವೃದ್ಧರನ್ನು
ಹುರಿದು ಮುಕ್ಕುತ್ತಿವೆ. ಈ ಕಾರಣಕ್ಕಾಗಿ ಈ
ಮಾಸ್ಕ್ ಸಂಸ್ಕೃತಿ ನಿಧಾನವಾಗಿ ಅಲ್ಲಿನ ಎಲ್ಲ
ವರ್ಗದ ಜನರನ್ನು, ಉದ್ಯೋಗಸ್ಥರನ್ನು
ಆವರಿಸುತ್ತಿದೆ.

1/2 ಈ ಪರಿಸ/ ರ ಅನಾಹುತಗಳು ನಿಸರ್ಗ
ವಿಕೋಪದಿಂದ ಉದ್ಭವಿಸಿದವುಗಳಲ್ಲ,
ಬದಲಾಗಿ ಮಾನವ ನಿರ್ಮಿತ ವಿಷಮ ಸ್ಥಿತಿ.
ಡಿಸೇಲ್ ಬಳಕೆಯ ವಾಹನಗಳ ಅತಿಯಾದ
ಓಡಾಟ. ಜನರೇಟರ್, ಎಸಿ ಉಪಯೋಗ.
3/4 ಗಿಡ–ಮರಗಳ/ ನಾಶ. ಎಲ್ಲೆಲ್ಲೂ
ಕಾಂಕ್ರೀಟಿಕರಣ. ರಸ್ತೆಗಳ ಕಳಪೆ ನಿರ್ವಹಣೆ.
ಜಲ ಮೂಲಗಳ ಕಡೆಗಣನೆ. ಪಕ್ಕದ ಯಮುನಾ
ನದಿಗೆ ಕೊಳಚೆ ಸೇರಿಸಿ ಹಾಳು ಮಾಡಿದ್ದು.
ಮಹಾನಗರದ ಘನತ್ಯಾಜ್ಯಕ್ಕೆ ಬೆಂಕಿ. ದಟ್ಟ ಹೊಗೆ
6 ಉಗುಳುವ ಸಾXಲು ಸಾಲು ಕೈಗಾರಿಕೆಗಳು.
ಅದರಲ್ಲೂ ದೆಹಲಿ ಪಕ್ಕದ ಹರಿಯಾಣ,
ಪಂಜಾಬ ರಾಜ್ಯಗಳಲ್ಲಿನ ರೈತರು ಕಬ್ಬು
ಮತ್ತು ಭತ್ತ ಕಟಾವಿನ ಬಳಿಕ
ಭೂಮಿಯಲ್ಲಿ ಉಳಿಯುವ ಕಳೆಗೆ ಬೆಂಕಿ
ಹಚ್ಚುವುದು. ಇವೆಲ್ಲವೂ ರಾಜಧಾನಿಯ
ಮೇ/ಲೆ ವಾಯುಮಾಲಿನ್ಯ ದಾಳಿಗೆ ಕಾರಣವಾಗಿ 1/4
ಪರಿಸರದಲ್ಲಿ ಏರುಪೇರಾಗುವಂತೆ ಮಾಡಿವೆ.

ಈಗ ರಾಜಧಾನಿಯ ಶ್ವಾಸಕೋಶವೇ
ಬಂದ್ ಆದಂತಾಗಿದ್ದು, ದೆಹಲಿಯಲ್ಲೀಗ
'ಆರೋಗ್ಯ ತುರ್ತು ಪರಿಸ್ಥಿತಿ' ಹೇರಲಾಗಿದೆ.
ನವೆಂಬರ್ ಐದ/ರವರೆಗೆ ಎಲ್ಲ ನಿರ್ಮಾಣ 1/2
ಕಾಮಗಾರಿಗಳನ್ನು ನಿರ್ಬಂಧಿಸಿದೆ. ಧೂಳು
ಸೃಷ್ಟಿಸುವ ಸಿಮೆಂಟ್, ಕಲ್ಲು, ಖಡಿ,
ಮರಳು ಹೊತ್ತ ಲಾರಿಗಳು ದೆಹಲಿ
ಮಹಾನಗರ ಪ್ರವೇಶ ನಿಷೇಧಿಸಲಾಗಿದೆ.
ಹಳೆಯ ಕಟ್ಟಡ ತೆರವು, ಚರಂಡಿ, ರಸ್ತೆ/ 3/4
ನಿರ್ಮಾಣ ಸ್ಥಗಿತಗೊಳಿಸಿದೆ. ವಾಯು
ಪ್ರಧೂಷಣಕ್ಕೆ ನಾಲ್ಕಾರು ದಿನವಾದರೂ ತಡೆ
ಹಾಕುವ ಚಿಂತನೆ ಇದ್ದು, ಅದನ್ನು ಕೂಡಲೇ
ಕಾರ್ಯರೂಪಕ್ಕೆ ತಂದರೆ ದೆಹಲಿ ವಾಸದ
ಜನರಿಗೆ ಅನುಕೂಲವಾಗಲಿದೆ.

ಇಂತಿ

ನೊಂದ ನಾಗರೀಕ.X 7